

بسم الله الرّحمٰن الرّحيم

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಓದುವುದರಿಂದ ಉಂಟಾಗುವ ಗುಣಾತ್ಮಕ ಮತ್ತು ಋಣಾತ್ಮಕ ಪ್ರಭಾವ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **06-02-2015** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಓದುವುದರಿಂದ ಉಂಟಾಗುವ ಗುಣಾತ್ಮಕ ಮತ್ತು ಋಣಾತ್ಮಕ ಪ್ರಭಾವದ ಬಗ್ಗೆ ಹೇಳುವುದಾದರೆ ಜನರು ಯಾವ ರೀತಿ ಯೋಚಿಸಿ ಗ್ರಂಥ ಓದುತ್ತಾರೋ ಅದೇ ರೀತಿಯ ಪ್ರಭಾವ ಅವರ ಮೇಲೆ ಉಂಟಾಗುತ್ತದೆ. ಇದಕ್ಕೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಘಟನೆಯನ್ನು ವಿವರಿಸುತ್ತಾರೆ. "ಮೌಲವಿ ಮುಹಮ್ಮದ್ ಅಹ್‌ಸನ್ ಸಾಹೇಬ್ ಅಮ್‌ರೂಹೀ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೀಗೆ ಹೇಳಿದರು: ಮೌಲವಿ ಬಶೀರ್ ಅಹ್ಮದ್ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೆಂಬಲಿಗರಾಗಿದ್ದರು. ಆದರೆ ನಾನು (ಎಂದರೆ ಮೌಲವಿ ಅಹ್‌ಸನ್ ಸಾಹೇಬ್) ವಿರೋಧಿಯಾಗಿದ್ದೆ. ಮೌಲವಿ ಬಶೀರ್ ಅಹ್ಮದ್ ಸಾಹೇಬ್ ಜನರೊಂದಿಗೆ ಬರಾಹೀನೆ ಅಹ್ಮದಿಯಾ ಓದಲು ಹೇಳುತ್ತಿದ್ದರು ಮತ್ತು ಆ ಗ್ರಂಥದ ಲೇಖಕ ಮುಜದ್ದಿದ್ ಎಂದು ಹೇಳುತ್ತಿದ್ದರು. ನಾನು ಮೌಲವಿ ಬಶೀರ್ ಸಾಹೇಬರೊಂದಿಗೆ ಹೇಳಿದೆ– ನಾವು ವಾದ ಪ್ರತಿವಾದ ಮಾಡುವ, ಮುಜದ್ದಿದರೋ ಅಲ್ಲವೋ ಎಂಬುದರ ಬಗ್ಗೆ. ಆದರೆ ಶರ್ತವೇನೆಂದರೆ ನೀವು ಬೆಂಬಲಿಗರಾದ ಕಾರಣ ವಿರೋಧಿಸುವ ದೃಷ್ಟಿಯಲ್ಲಿ ಗ್ರಂಥ ಓದಿರಿ. ನಾನು ವಿರೋಧಿಯಾದ ಕಾರಣ ಬೆಂಬಲಿಗನ ದೃಷ್ಟಿಯಲ್ಲಿ ಆ ಗ್ರಂಥ ಓದುವೆನು. ಏಳೆಂಟು ದಿನಗಳು ಗ್ರಂಥ ಓದಲು ನಿಗದಿಪಡಿಸಲಾಯಿತು. ಇಬ್ಬರೂ ಆ ಗ್ರಂಥ ಓದಿದೆವು ಇದರ ಪರಿಣಾಮ ಏನಾಯಿತೆಂದರೆ ವಿರೋಧಿಯಾಗಿದ್ದ ನಾನು ಅಹ್ಮದಿಯಾದೆನು. ಆದರೆ ಬಶೀರ್ ಸಾಹೇಬರ ವಿಶ್ವಾಸ ತಗ್ಗುತ್ತಾ ಹೋಯಿತು."

ಈ ಘಟನೆಯ ಬಗ್ಗೆ ಉಲ್ಲೇಖಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಮನಶ್ಶಾಸ್ತ್ರದ ದೃಷ್ಟಿಯಿಂದ ಮುಖಾಮುಖಿ ವಾದ ವಿವಾದ ನಡೆಸುವುದು ಬಹಳ ಹಾನಿಕರವಾಗುತ್ತದೆ. ಸಮಸ್ಯೆಗಳು ಎಷ್ಟು ಸೂಕ್ಷ್ಮವಾಗಿವೆ ಎಂದರೆ ಅವುಗಳನ್ನು ಅರ್ಥಮಾಡಿಕೊಳ್ಳಲು ಪ್ರತಿಯೊಬ್ಬ ಅಧ್ಯಾಪಕನಿಗೆ ಯೋಗ್ಯತೆ ಇರುವುದಿಲ್ಲ. ಒಳ್ಳೆಯ ಒಂದು ವಿಷಯಕ್ಕೆ ಸಂಬಂಧಿಸಿ ಆಕ್ಷೇಪವನ್ನು ಮಾಡುವ ಉದ್ದೇಶದಿಂದ ಯಾವುದಾದರೂ ಹುಳುಕನ್ನು ಕಂಡು ಹಿಡಿಯಲು ಪ್ರಯತ್ನಿಸಿದರೆ ಅದರಿಂದಲೇ ತಪ್ಪುಗ್ರಹಿಕೆ ಉದ್ಭವವಾಗುತ್ತದೆ. ಕೆಲವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ತಾವು ಓದಿರುವುದಾಗಿ ಹೇಳಿ ಆಕ್ಷೇಪಿಸುತ್ತಾರೆ. ಅದರಲ್ಲಿ ಹಾಗೆ ಬರೆದಿದೆ, ಹೀಗೆ ಬರೆದಿದೆ ಎಂದೆಲ್ಲಾ ಹೇಳುತ್ತಾರೆ. ಇದಕ್ಕೆ ಕಾರಣವೇನೆಂದರೆ ಅವರು ಓದುವುದೇ ಆಕ್ಷೇಪಗಳನ್ನು ಮಾಡಲಿಕ್ಕೋಸ್ಕರವಾಗಿದೆ. ಬರೆದ ಸಂದರ್ಭ ಮತ್ತು ಸನ್ನಿವೇಶಗಳನ್ನು ಹೇಳದೆ ಕೇವಲ ಉಲ್ಲೇಖಗಳನ್ನು ಮಾತ್ರ ಎತ್ತಿ ಹಿಡಿದು ಟೀಕಿಸುತ್ತಾರೆ. ಇದೊಂದು ಹೊಸ ವಿಷಯವೇನೂ ಅಲ್ಲ. ಆಕ್ಷೇಪ ಮಾಡುವವರು ಅಲ್ಲಾಹನ ಗ್ರಂಥದಲ್ಲಿಯೂ ಆಕ್ಷೇಪಕರವಾದುದನ್ನು ಕಂಡುಹಿಡಿಯುತ್ತಾರೆ. ಇದೇ ಕಾರಣದಿಂದ ಅಲ್ಲಾಹನು ಸ್ವತಃ ಹೀಗೆ ಹೇಳಿದ್ದಾನೆ: ಅದು ಸತ್ಯವಿಶ್ವಾಸಿಗಳಿಗೆ ಆಧ್ಯಾತ್ಮಿಕ ಉಪಶಮನ ಮತ್ತು ಅನುಗ್ರಹವಾಗಿದೆ. ಆದರೆ ಆಕ್ಷೇಪ ಮಾಡುವ ದೌರ್ಜನ್ಯಗಾರರು ನಷ್ಟಕ್ಕೊಳಪಡುತ್ತಾರೆ ಎಂದು. ಆದುದರಿಂದ ಪರಿಶುದ್ಧವಾದ ಹೃದಯವನ್ನು ಹೊಂದಿ ಓದದಿದ್ದರೆ ಅಲ್ಲಾಹನ ಗ್ರಂಥವನ್ನು ಓದುವುದರಿಂದಲೂ ಪ್ರಯೋಜನ ಲಭಿಸಲಾರದು.

ನಮಾಝ್‌ನ ಮಹತ್ವದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಘಟನೆ ಹೀಗೆ ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಒಂದು ಮೊಕದ್ದಮೆ ಬಗ್ಗೆ ಕೋರ್ಟ್‌ನಲ್ಲಿದ್ದಾಗ ನಮಾಝ್‌ನ ಸಮಯವಾಯಿತು. ಅವರು ನಮಾಝ್ ಅನುಷ್ಠಿಸಲು ಹೋದರು. ಆಗ ಕೋರ್ಟ್ ಅವರನ್ನು ವಿಚಾರಣೆಗೆ ಕರೆಯಿತು. ಆದರೆ, ಅವರು ಆರಾಧನೆಯಲ್ಲಿ ತಲ್ಲೀನರಾಗಿದ್ದ ಕಾರಣ ಆ ವೇಳೆಯಲ್ಲಿ ಹಾಜರಾಗಲು ಸಾಧ್ಯವಾಗಲಿಲ್ಲ. ಕಾನೂನು ಪ್ರಕಾರ ಆಗ ಅವರು ಹಾಜರಾಗದ ಕಾರಣ ಕೋರ್ಟ್ ಅವರ ಅನುಪಸ್ಥಿತಿಯಲ್ಲಿ ಅವರ ವಿರುದ್ಧ ತೀರ್ಪು ನೀಡಬಹುದಾಗಿತ್ತು. ಆದರೆ ಅಲ್ಲಾಹನಿಗೆ ಅವರ ವರ್ತನೆ ಇಷ್ಟಕರವಾದ ಕಾರಣ ಮ್ಯಾಜಿಸ್ಟ್ರೇಟ್ ಅವರ ಬಗ್ಗೆ ಒಳ್ಳೆಯ ಭಾವನೆ ಹೊಂದುವಂತೆ ಅಲ್ಲಾಹನು ಮಾಡಿದನು. ಮೊಕದ್ದಮೆ ಅವರ ಪರವಾಗಿ ಎಂದರೆ ಅವರ ತಂದೆಯವರ ಪರವಾಗಿ ತೀರ್ಪು ಆಯಿತು. ಅದು ಆಸ್ತಿಗಳಿಗೆ ಸಂಬಂಧಿಸಿ ಅವರ ತಂದೆಯವರಿಂದ ದಾಖಲಾದ ಮೊಕದ್ದಮೆಯಾಗಿತ್ತು. ಅವರು ತನ್ನ ತಂದೆಯವರ ಒತ್ತಾಯದ ಪ್ರಕಾರ ಮೊಕದ್ದಮೆಗೋಸ್ಕರ ಹೋಗುತ್ತಿದ್ದರು.

ಬಾಜಮಾಅತ್ ನಮಾಝ್‌ನ (ಸಾಮೂಹಿಕವಾಗಿ ಮಾಡುವ ನಮಾಝ್‌ನ) ಮಹತ್ವದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಮಸ್‌ಜಿದ್‌ಗೆ ಹೋಗಿ ಸಾಮೂಹಿಕ

ನಮಾಝ್ ಮಾಡಲು ಸಾಧ್ಯವಾಗದೆ ಇದ್ದಾಗ ಅವರು ಮನೆಯಲ್ಲಿಯೇ ಅಲ್ಲಿರುವವರನ್ನೆಲ್ಲಾ ಸೇರಿಸಿ ಸಾಮೂಹಿಕವಾಗಿ ನಮಾಝ್ ಮಾಡುತ್ತಿದ್ದರು. ಅವರು ಒಬ್ಬನೇ ಒಬ್ಬನಾಗಿ ನಮಾಝ್ ಮಾಡುವುದು ಅತ್ಯಪೂರ್ವವಾಗಿತ್ತು.

ಪ್ರತಿಯೊಂದು ಸ್ಥಳದಲ್ಲಿ ನಮ್ಮ ಜಮಾಅತಿನವರು ಮಸ್‌ಜಿದ್‌ಗೆ ಹೋಗಿ ಜಮಾಅತಾಗಿ ನಮಾಝ್ ಅನುಷ್ಠಿಸಬೇಕು. ಇದು ಸಾಧ್ಯವಾಗುವುದಿಲ್ಲವಾದರೆ ಪತ್ನಿ ಮತ್ತು ಮಕ್ಕಳೊಂದಿಗೆ ನಮಾಝ್ ಸಾಮೂಹಿಕವಾಗಿ ಅನುಷ್ಠಿಸಬೇಕು. ನಗರ ವಿಸ್ತಾರವಾಗಿದ್ದರೆ ಮತ್ತು ನಮ್ಮ ಜಮಾಅತಿನವರು ದೂರ ದೂರ ವಾಸಿಸುತ್ತಿದ್ದರೆ ಬಡಾವಣೆಗಳಲ್ಲಿ ಬಾಜಮಾಅತ್ ನಮಾಝ್‌ಗೆ ವ್ಯವಸ್ಥೆ ಮಾಡಬೇಕು. ಮಸ್‌ಜಿದ್‌ಗಳು ಇಲ್ಲದ ಸ್ಥಳಗಳಲ್ಲಿ ಮಸ್‌ಜಿದ್‌ಗಳನ್ನು ನಿರ್ಮಿಸಲು ಪ್ರಯತ್ನಿಸಬೇಕು.

ಜಮಾಅತಾಗಿ ನಮಾಝ್ ಮಾಡುವುದರ ಮಹತ್ವ ಎಷ್ಟಿದೆಯೆಂದರೆ, ಮನೆಯಲ್ಲಾದರೂ ಮಕ್ಕಳನ್ನು ಸೇರಿಸಿಕೊಂಡು ನಮಾಝ್ ಮಾಡಿರಿ. ಮಕ್ಕಳಲ್ಲೂ ಜಮಾಅತಾಗಿ ನಮಾಝ್ ಮಾಡುವ ಭಾವನೆ ತಲೆದೋರಲಿ. ನಮಾಝ್ ಅದರ ಎಲ್ಲ ಶರತ್ತುಗಳ ಪ್ರಕಾರ ಅನುಷ್ಠಿಸಬೇಕು ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗ್ರಹಪಡಿಸಿದ್ದಾರೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನಮಾಝಿನ ಸೌಂದರ್ಯ ಅದನ್ನು ಸಾವದಾನವಾಗಿ ಅನುಷ್ಠಿಸುವುದರಲ್ಲಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ಹೇಳಿದ್ದಾರೆ: ಕೋಳಿ ಕೊಕ್ಕು ಹಾಕಿ ಧಾನ್ಯ ಹೆಕ್ಕುವ ಹಾಗೆ ನಮಾಝ್ ಮಾಡುವ ಜನರಿದ್ದಾರೆ. ಖಂಡಿತವಾಗಿಯೂ ಅದರಿಂದ ಯಾವ ಲಾಭವೂ ಸಿಗಲಾರದು. ಇಂತಹ ನಮಾಝ್ ಕೆಲವು ಸಾರಿ ಶಾಪಕ್ಕೆ ಕಾರಣವಾಗಲೂಬಹುದು.

ಒಮ್ಮೆ ಒಬ್ಬರು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರೊಂದಿಗೆ ಹೀಗೆ ದೂರಿದರು– ನಮ್ಮ ಅಧೀನದಲ್ಲಿರುವ ಹುದ್ದೇದಾರರು ನಮಗೆ ಸಲಾಮ್ ಹೇಳುವುದಿಲ್ಲ ಎಂದು. ಆಗ ಅವರೊಂದಿಗೆ ಹುಝೂರ್ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆಯನ್ನು ಒಬ್ಬ ಸಹೋದರ ಪಾಲಿಸದಿದ್ದರೆ ನಾವೇಕೆ ಅದನ್ನು ಪಾಲಿಸದಿರಬೇಕು? ಕೇವಲ ಚಿಕ್ಕವನು ಸಲಾಮ್ ಮೊದಲು ಹೇಳಬೇಕು ದೊಡ್ಡವ ಹೇಳಬಾರದು ಎಂದು ಎಲ್ಲಿಯೂ ಆಜ್ಞೆ ನೀಡಲಾಗಿಲ್ಲ. ಒಬ್ಬ ಅಧೀನ ಹುದ್ದೇದಾರ ಸಲಾಮ್ ಹೇಳದಿದ್ದರೆ ಅವನ ಮೇಲಧಿಕಾರಿ ಮೊದಲು ಅವರಿಗೆ ಸಲಾಮ್ ಹೇಳಲಿ. ಇಂತಹ ವಿಷಯಗಳಲ್ಲಿ ನಾಝಿರ್‌ಗಳು ದೂರು ನೀಡದೆ ಸ್ವತಃ ಉತ್ತಮ ಮಾದರಿ ತೋರಿಸಬೇಕು. ನಮ್ಮ ಎಲ್ಲಾ ಹುದ್ದೇದಾರರು ಅವರು ಯಾವ ಮಟ್ಟದ ಹುದ್ದೇದಾರರಾದರೂ ಈ ಉದಾಹರಣೆಯನ್ನು ಪಾಲಿಸಬೇಕು. ಸಲಾಮ್ ಹೇಳಲು ಮೊದಲಿಗನಾಗಬೇಕು. ಜಮಾಅತ್‌ನಲ್ಲಿ ಎಲ್ಲ ಗುಂಪಿನ ಜನರು ಪರಸ್ಪರ ಸಲಾಮ್ ಹೇಳಬೇಕು. ಇದು ಹದೀಸ್‌ನ ನಿರ್ದೇಶವೂ ಆಗಿದೆ.

ಒಂದು ಮೊಕದ್ದಮೆಯ ವಿಚಾರಣೆ ನಡೆಸುತ್ತಿದ್ದ ಮ್ಯಾಜಿಸ್ಟ್ರೇಟ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಶಿಕ್ಷೆ ನೀಡಬೇಕೆಂದು ದೃಢ ನಿರ್ಧಾರ ಮಾಡಿದ್ದರು. ಈ ವಿಷಯದ ಬಗ್ಗೆ ವಿವರಿಸುವ ಮೊದಲು ಮುನ್ನುಡಿಯಾಗಿ ಒಂದು ಘಟನೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ:

ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲರು ಮುಸ್ಲಿಮರ ಜನ ಸಂಖ್ಯೆಯ ಗಣನೆ ಮಾಡಿಸಿದರು. ಆಗ ಶಿಷ್ಯರು ಹೇಳಿದರು: ನಾವು ಏಳುನೂರು ಆಗಿದ್ದೇವೆ. ಈಗ ನಮ್ಮನ್ನು ಯಾರಾದರೂ ನಾಶಮಾಡಬಹುದೆಂದು ಯೋಚಿಸಲು ಸಾಧ್ಯವೇ? ಎಂದು. ನೋಡಿರಿ ಇದು ಎಂತಹ ಭವ್ಯ ವಿಶ್ವಾಸವಾಗಿದೆ. ಏಳುನೂರು ಜನರನ್ನು ಶತ್ರುಗಳು ನಾಶಮಾಡಬಲ್ಲರೆಂದು ಅವರಿಗೆ ಊಹಿಸಲು ಸಾಧ್ಯವಿರಲಿಲ್ಲ. ಸತ್ಯವಿಶ್ವಾಸದ ಶಕ್ತಿ ಬಹಳ ಬಲಿಷ್ಠವಾಗಿರುತ್ತದೆ.

ಮೇಲೆ ಹೇಳಿದ ಮೊಕದ್ದಮೆಯ ಘಟನೆಯೆಂದರೆ, ಗುರುದಾಸಪುರದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಮೀಪಕ್ಕೆ ಖ್ವಾಜಾ ಕಮಾಲುದ್ದೀನ್ ಮತ್ತು ಇತರ ಅಹ್ಮದಿಯರು ಬಂದು ಹೇಳಿದರು: ಈ ಮೊಕದ್ದಮೆ ವಿಚಾರಣೆ ಮಾಡುತ್ತಿರುವ ಮ್ಯಾಜಿಸ್ಟ್ರೇಟ್ ಲಾಹೋರಿಗೆ ಹೋಗಿದ್ದರು. ಅವರೊಂದಿಗೆ ಆರ್ಯ ಸಮಾಜಿಗಳು ಹೇಳಿದ್ದಾರೆ– ಮಿರ್ಝಾ ಸಾಹೇಬರು ನಮ್ಮ ಧಾರ್ಮಿಕ ಶತ್ರುವಾಗಿದ್ದಾರೆ. ಆದುದರಿಂದ ಅವರಿಗೆ ಖಂಡಿತವಾಗಿ ಶಿಕ್ಷೆ ನೀಡಬೇಕು ಎಂದು. ಒಂದು ದಿನದ ಶಿಕ್ಷೆಯಾದರೂ ಸರಿ. ಅದು ನೀವು ನಮ್ಮ ಸಮಾಜಕ್ಕೆ ಮಾಡುವ ಸೇವೆಯಾಗುವುದು. ಮ್ಯಾಜಿಸ್ಟ್ರೇಟ್ ಶಿಕ್ಷೆ ನೀಡುವುದಾಗಿ ವಾಗ್ದಾನ ಸಹ ಮಾಡಿ ಬಂದಿದ್ದಾರೆ. ಈ ಮಾತು ಆಲಿಸುವಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮಲಗಿದ್ದರು ಅವರು ಒಂದು ಪಾರ್ಶ್ವಕ್ಕೆ ಸರಿದು ಮೊಣಕೈ ಊರಿ ತಲೆ ಎತ್ತಿ ಹೇಳಿದರು: ಖ್ವಾಜಾ ಸಾಹೇಬ್, ನೀವು ಎಂತಹ ಮಾತು ಹೇಳುತ್ತಿರುವಿರಿ. ಯಾರಾದರೂ ಅಲ್ಲಾಹನ ಸಿಂಹದ ಮೇಲೆ ಕೈ ಹಾಕಬಲ್ಲನೆ?

ಈ ಮ್ಯಾಜಿಸ್ಟ್ರೇಟ್‌ಗೆ ಅಲ್ಲಾಹನು ಶಿಕ್ಷೆ ನೀಡಿದನು. ಅವರನ್ನು ಗುರುದಾಸಪುರದಿಂದ ವರ್ಗಾಯಿಸಲಾಯಿತು. ಅವರ ಹುದ್ದೆಯನ್ನು ತಗ್ಗಿಸಲಾಯಿತು. ಬೇರೆ ಮ್ಯಾಜಿಸ್ಟ್ರೇಟ್ ಅಧಿಕಾರಿ ವಹಿಸಿದ ನಂತರ ಆ ಮೊಕದ್ದಮೆಯ ತೀರ್ಪು ನೀಡಲಾಯಿತು. ಸತ್ಯ ವಿಶ್ವಾಸದ ಶಕ್ತಿ ಬಹಳ ಬಲಿಷ್ಠವಾಗಿರುತ್ತದೆ. ಯಾರಿಗೂ ಅದನ್ನು ಎದುರಿಸಲು ಸಾಧ್ಯವಿಲ್ಲ.

ಇದೇ ಮೊಕದ್ದಮೆ ಬಗ್ಗೆ ಇನ್ನೊಂದು ಕಡೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಖ್ವಾಜಾ ಕಮಾಲುದ್ದೀನ್ ಹೇಳಿದರು– ಹುಝೂರ್, ಮ್ಯಾಜಿಸ್ಟ್ರೇಟ್ ಖಂಡಿತವಾಗಿ ಬಂಧಿಸಿ ಶಿಕ್ಷೆ ನೀಡುವರು. ಆದುದರಿಂದ ಎದುರು ಪಕ್ಷದವರೊಂದಿಗೆ ರಾಜಿ

ಮಾಡಿಕೊಳ್ಳುವುದು ಉತ್ತಮವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಖ್ವಾಜಾ ಸಾಹೇಬ್, ಅಲ್ಲಾಹನ ಸಿಂಹದ ಮೇಲೆ ಕೈ ಹಾಕುವುದು ಅಷ್ಟು ಸುಲಭದ ಕೆಲಸವೇನೂ ಅಲ್ಲ. ನಾನು ಅಲ್ಲಾಹನ ಸಿಂಹವಾಗಿದ್ದೇನೆ. ನನ್ನ ಮೇಲೆ ಕೈಹಾಕಿ ನೋಡಲಿ.

ಆ ಮೊಕದ್ದಮೆಯ ವಿಚಾರಣೆ ಇಬ್ಬರು ಮ್ಯಾಜಿಸ್ಟ್ರೇಟರು ಜಂಟಿಯಾಗಿ ನಡೆಸುತ್ತಿದ್ದರು. ಅವರಲ್ಲಿ ಒಬ್ಬ ಮ್ಯಾಜಿಸ್ಟ್ರೇಟರ ಒಬ್ಬ ಮಗ ಹುಚ್ಚನಾದನು. ಆತನ ಪತ್ನಿ ಅವರಿಗೆ ಪತ್ರ ಬರೆದು ಹೇಳಿದಳು: ಒಬ್ಬ ಮುಸ್ಲಿಮ್ ಸಂತರನ್ನು ಅಪಮಾನಿಸಿದ ಕಾರಣ ನಮ್ಮ ಒಬ್ಬ ಮಗ ಹುಚ್ಚನಾದನು. ಇನ್ನೊಬ್ಬ ಮಗನ ಬಗ್ಗೆ ಜಾಗ್ರತೆ ವಹಿಸಿರಿ ಎಂದು. ಆದರೆ ಮ್ಯಾಜಿಸ್ಟ್ರೇಟ್ ಆ ಮಾತನ್ನು ಗಮನಿಸಲಿಲ್ಲ. ಅವರ ಎರಡನೆಯ ಮಗ ರಾವಿ ನದಿಗೆ ಇಳಿದು ಸ್ನಾನ ಮಾಡುತ್ತಿದ್ದಾಗ ಒಂದು ಮೊಸಳೆ ಅವನ ಕಾಲನ್ನು ಕಚ್ಚಿ ಎಳೆದುಕೊಂಡು ಹೋಯಿತು. ಅವನು ಸತ್ತು ಹೋದನು. ಆ ಮ್ಯಾಜಿಸ್ಟ್ರೇಟ್ ಬಹಳ ಸತಾಯಿಸುತ್ತಿದ್ದರು. ವಿಚಾರಣೆ ಸಮಯ ಇಡೀ ದಿನ ನಿಂತುಕೊಳ್ಳಬೇಕಾಗುತ್ತಿತ್ತು. ಕುಡಿಯಲು ನೀರು ಕೇಳಿದರೆ ನೀರು ಕುಡಿಯಲು ಅನುಮತಿಸಲಿಲ್ಲ. ಇನ್ನೊಬ್ಬ ಮ್ಯಾಜಿಸ್ಟ್ರೇಟ್ ಸಹ ಪದವಿಯಿಂದ ಚ್ಯುತನಾದನು. ಇವರಿಬ್ಬರೂ ಬಹಳ ದೌರ್ಜನ್ಯಗಾರರಾಗಿದ್ದರು. ಅವರು ತಮ್ಮ ದುರ್ಗತಿಯನ್ನು ಕಂಡರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಇವುಗಳು ಆಯಾತೆ ಬಯ್ಯಿನಾತ್ ಆಗಿವೆ. ಸ್ಪಷ್ಟವಾದ ದೃಷ್ಟಾಂತಗಳಾಗಿವೆ. ಇವುಗಳ ಮೂಲಕ ಅಲ್ಲಾಹನು ತನ್ನ ಪ್ರವಾದಿಗಳ ಸತ್ಯತೆಯನ್ನು ಬಹಿರಂಗಗೊಳಿಸುತ್ತಾನೆ."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಒಂದು ಘಟನೆ ಹೀಗೆ ವಿವರಿಸುತ್ತಾರೆ: ರುಸ್ತುಮ್ ಎಂಬ ಪ್ರಸಿದ್ಧ ಪರ್ಶಿಯನ್ ಪಹಿಲ್ವಾನನ ಮನೆಗೆ ಒಮ್ಮೆ ಒಬ್ಬ ಕಳ್ಳ ಕದಿಯಲು ಬಂದಾಗ ರುಸ್ತುಮ್ ಅವನನ್ನು ಹಿಡಿಯಲು ಪ್ರಯತ್ನಿಸಿದನು. ಆ ಕಳ್ಳನಿಗೆ ಕುಸ್ತಿಮಾಡಲು ಗೊತ್ತಿತ್ತು. ಅವನು ರುಸ್ತುಮ್‌ನನ್ನು ಕೆಳಗೆ ಹಾಕಿದನು. ರುಸ್ತುಮ್ ಆಗ ಕಳ್ಳ ತನ್ನನ್ನು ಕೊಲ್ಲಬಹುದೆಂದು ಹೆದರಿದನು. ಆಗ ಅವನು ಬೊಬ್ಬಿಟ್ಟನು "ರುಸ್ತುಮ್ ಬಂದನು" ಎಂದು. ಆಗ ಕಳ್ಳನು ಹೆದರಿ ಕೂಡಲೆ ರುಸ್ತುಮನನ್ನು ಬಿಟ್ಟು ಓಡಿ ಹೋದನು. ಕಳ್ಳ ರುಸ್ತುಮ್‌ನೊಂದಿಗೆ ಹೋರಾಡಿ ಅವನನ್ನು ಸೋಲಿಸಿದ್ದರೂ ರುಸ್ತುಮ್ ಎಂದು ಹೆಸರು ಕೇಳಿದಾಗ ಭಯಭೀತನಾದನು. ಇದರ ಬಗ್ಗೆ ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಕೆಲವು ಸಾರಿ ಜನರು ಎಂತಹ ವದಂತಿ ಹರಡುತ್ತಾರೆಂದರೆ ಜನರು ಧೈರ್ಯಗೆಡುತ್ತಾರೆ. ಆದುದರಿಂದ ಶೌರ್ಯವನ್ನು ಮತ್ತು ಧೈರ್ಯವನ್ನು ಕಾಪಾಡಲು ತಪ್ಪು ವದಂತಿಗಳು ಹರಡದಂತೆ ನೋಡಿಕೊಳ್ಳುವುದು ಅತ್ಯಾವಶ್ಯಕವಾಗಿದೆ.

ಕರಮ್‌ದೀನ್ ಎಂಬ ವ್ಯಕ್ತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ದಾಖಲಿಸಿದ ಮೊಕದ್ದಮೆ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಈ ಮೊಕದ್ದಮೆಗೋಸ್ಕರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಾಡಿದ ಪ್ರಯಾಣ ಅವರ ವಿಜಯವು ಪ್ರಾರಂಭವಾಗುವ ಪ್ರಥಮ ಚಿಹ್ನೆಯಾಗಿತ್ತು. ಅವರು ಒಂದು ಕ್ರಿಮಿನಲ್ ಮೊಕದ್ದಮೆಗೆ ಉತ್ತರ ಹೇಳಲು ಹೋಗುತ್ತಿದ್ದರೂ ಅವರನ್ನು ಕಾಣಲು ಎಷ್ಟು ಸಂಖ್ಯೆಯಲ್ಲಿ ಜನರು ಜಮಾಯಿಸುತ್ತಿದ್ದರೆಂದರೆ ಅದನ್ನು ಅಂದಾಜು ಮಾಡಲು ಸಾಧ್ಯವಿರಲಿಲ್ಲ. ಅವರು ಜಹಲಮ್ ರೈಲ್ವೇ ಸ್ಟೇಷನ್‌ನಲ್ಲಿ ರೈಲು ಬಂಡಿಯಿಂದ ಇಳಿದಾಗ ಪ್ಲಾಟ್ ಫಾರಂನಲ್ಲಿ ಜನರಿಗೆ ನಿಲ್ಲಲು ಸಹ ಸ್ಥಳ ಇರಲಿಲ್ಲ. ಸ್ಟೇಷನ್ ಹೊರಗೆ ಜನರು ಮಾರ್ಗದ ಇಬ್ಬದಿಗಳಲ್ಲಿ ಜಮಾಯಿಸಿದ್ದರು. ಕುದುರೆ ಬಂಡಿಯಲ್ಲಿ ಆ ಮಾರ್ಗದಲ್ಲಿ ಮುಂದೆ ಸಾಗಲು ಬಹಳ ಕಷ್ಟವಾಗುತ್ತಿತ್ತು. ಅಂದಾಜು ಒಂದು ಸಾವಿರ ಜನರು ಅಂದು ಅಲ್ಲಿ ಬೈಅತ್ ಮಾಡಿದರು. ಅವರು ನ್ಯಾಯಾಲಯದಲ್ಲಿ ಹಾಜರಾದಾಗ ವಿಚಾರಣೆ ಆಲಿಸಲು ಅಲ್ಲಿ ನೆರೆದ ಭಾರೀ ಜನಸಮೂಹದ ಕಾರಣ ವಿಚಾರಣೆ ನಡೆಸಲು ಬಹಳ ಕಷ್ಟವಾಗುತ್ತಿತ್ತು. ಮೊದಲನೆಯ ಸಲ ಹಾಜರಾದಾಗಲೇ ಅವರನ್ನು ದೋಷಮುಕ್ತರೆಂದು ಘೋಷಿಸಲಾಯಿತು.

ಈ ಘಟನೆಯ ನಂತರ ಜಮಾಅತ್ ಆಶ್ಚರ್ಯಕರವಾಗಿ ವರ್ಧಿಸಲು ತೊಡಗಿತು. ಕೆಲವು ಸಾರಿ ದಿನಾ ಐನೂರು ಐನೂರು ಜನ ಬೈಅತ್ ಮಾಡುತ್ತಿದ್ದರು. ಜಮಾಅತ್ ಸಾವಿರ ಸಂಖ್ಯೆಯಿಂದ ಲಕ್ಷಾಂತರವಾಗಿ ಬೆಳೆಯಿತು. ಎಲ್ಲ ವರ್ಗದ ಜನರು ಬೈಅತ್ ಮಾಡಿದರು. ಜಮಾಅತ್ ಬಹಳ ವೇಗವಾಗಿ ಬೆಳೆಯ ತೊಡಗಿತು. ಪಂಜಾಬಿನಿಂದ ಇತರ ಸಂಸ್ಥಾನಗಳಿಗೂ ಇತರ ದೇಶಗಳಿಗೂ ಹಬ್ಬಲು ತೊಡಗಿತು. ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೀವಿತ ಕಾಲದಲ್ಲಿಯೇ ಸಂಭವಿಸಿತು.

ಅಲ್ಲಾಹನು ಧಿಕ್ಕಾರಿಗಳಿಗೆ ಹೇಗೆ ಶಿಕ್ಷೆ ನೀಡುತ್ತಾನೆಂದು ನೋಡಿರಿ. ಒಬ್ಬ ಮ್ಯಾಜಿಸ್ಟ್ರೇಟಿನ ಸಂಭವ ನಾವು ಆಲಿಸಿದೆವು. ಇನ್ನೊಬ್ಬ ವ್ಯಕ್ತಿಯ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ:

ಗಡಿನಾಡಿನ ಒಬ್ಬ ಮೌಲವಿ ಅಬ್ದುಲ್ ಕರೀಮ್ ಎಂಬವರು ನಮ್ಮ ಜಮಾಅತಿನ ಕಠಿಣ ಶತ್ರುವಾಗಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿದ ಒಂದು ಸಂಭವವನ್ನು ಅವರು ಬಹಳ ತಾತ್ಸಾರದಿಂದ ವಿವರಿಸುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು: ಅಲ್ಲಾಹನ ನಬಿ ಎಂದು ವಾದಿಸುತ್ತಿದ್ದವನು ದಿಲ್ಲಿಗೆ ಹೋದಾಗ ಮಿರ್ಝಾ ಹೈರತ್ ಎಂಬ ವ್ಯಕ್ತಿ ಇನ್ಸ್‌ಪೆಕ್ಟರ್ ಆಫ್ ಪೋಲೀಸ್ ಎಂದು ಅಭಿನಯಿಸಿ ಮಿರ್ಝಾರ ಸಮೀಪ ಹೋದರು. ಆಗ ಮಿರ್ಝಾ ಮೇಲೆ ಮಾಳಿಗೆಯಲ್ಲಿದ್ದರು. (ಇದು ಸುಳ್ಳು ಆಗಿದೆ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್

ಮನೆಯ ಅಂಗಳದಲ್ಲಿ ಕುಳಿತಿದ್ದರು) ಮೌಲವಿ ಹೇಳುತ್ತಾರೆ: "ಪೋಲೀಸ್ ಇನ್ಸ್‌ಪೆಕ್ಟರ್ ಆಗಮಿಸಿದನೆಂದು ತಿಳಿದು ಮಿರ್ಝಾ ಗಾಬರಿಗೊಂಡು ಮಾಳಿಗೆಯಿಂದ ಇಳಿಯುವಾಗ ಕಾಲುಜಾರಿ ಮುಖಕೆಳಗಾಗಿ ಬಿದ್ದುಬಿಟ್ಟರು." ಜನರು ಈ ಭಾಷಣ ಕೇಳಿ ನಗುತ್ತಾ ಅಪಹಾಸ್ಯ ಮಾಡುತ್ತಿದ್ದರು. ಆದರೆ ಈ ಭಾಷಣ ಮಾಡಿದ ಅದೇ ರಾತ್ರಿ ಅಲ್ಲಾಹನು ಆ ಮೌಲವಿಯನ್ನು ಹಿಡಿಗೂಡಿದನು. ಅವರು ತನ್ನ ಮನೆಯ ಛಾವಣಿಯಲ್ಲಿ ನಿದ್ರಿಸುತ್ತಿದ್ದರು. ಆ ಛಾವಣಿಗೆ ಸುತ್ತು ಗೋಡೆ ಇರಲಿಲ್ಲ. ಏನೋ ಕೆಲಸಕ್ಕೆ ಅವರು ರಾತ್ರಿ ಎದ್ದಾಗ ಛಾವಣಿಯಿಂದ ಕಾಲು ಜಾರಿ ಬಿದ್ದು ಅಲ್ಲೇ ಮೃತಪಟ್ಟರು. ಪ್ರವಾದಿಗಳನ್ನು ಪರಿಹಾಸ ಮಾಡುವವರಿಗೆ ಎಂತಹ ಶಿಕ್ಷೆ ಸಿಗುತ್ತದೆ ಎಂದು ಜನರು ಕಂಡರು.

ಇಂದಿನ ಕಾಲದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಯಾರು ಪರಿಹಾಸ ಮಾಡುತ್ತಾ ಇದ್ದಾರೆಯೋ, ಅಲ್ಲಾಹನಿಗೆ ಅತ್ಯಂತ ಪ್ರಿಯರಾದ ಆ ಪ್ರವಾದಿಯವರನ್ನು ಪರಿಹಾಸ ಮಾಡುವವರನ್ನು ಅಲ್ಲಾಹನು ಸುಮ್ಮನೆ ಬಿಟ್ಟು ಬಿಡುವನೇ? ಖಂಡಿತವಾಗಿಯೂ ಇಲ್ಲ. ಅಲ್ಲಾಹನು ಅವರನ್ನು ಜನರಿಗೆ ನೀತಿಪಾಠವಾಗಿ ಮಾಡುವನು. ನಾವು ನಮ್ಮ ನೋವುಗಳನ್ನು ಪ್ರಾರ್ಥನೆಗೆ ಹಾಕಬೇಕು ಮತ್ತು ಈ ದಿನಗಳಲ್ಲಿ ನಾವು ವಿಶಿಷ್ಟವಾಗಿ ಪ್ರಾರ್ಥಿಸುತ್ತಿರಬೇಕು.

ಈ ಸಂಭವವನ್ನು ವಿವರಿಸಿದ ನಂತರ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ನೀವು ನಿಮ್ಮೊಳಗೆ ಎಂತಹ ಪರಿಶುದ್ಧ ಬದಲಾವಣೆ ಉಂಟು ಮಾಡಬೇಕೆಂದರೆ ಅದನ್ನು ಲೋಕದ ಜನರು ತಿಳಿದುಕೊಳ್ಳುವಂತಾಗಬೇಕು. ನಿಮ್ಮ ಸ್ಥಿತಿ ಹೇಗೆ ಆಗಬೇಕೆಂದರೆ, ನಿಮ್ಮ ಭಯಭಕ್ತಿ, ನಿಮ್ಮ ಪರಿಶುದ್ಧಿ, ಪ್ರಾರ್ಥನೆಗಳ ಅಂಗೀಕಾರ, ದೇವನೊಂದಿಗೆ ನಿಮಗಿರುವ ಸಾಮೀಪ್ಯ ಮೊದಲಾದವುಗಳನ್ನು ಕಂಡು ಜನರು ನಿಮ್ಮ ಕಡೆಗೆ ಆಕರ್ಷಿಸಲ್ಪಡುವಂತಾಗಬೇಕು. ನೀವು ನೆನಪಿಡಿರಿ, ಅಹ್ಮದಿಯಾ ಜಮಾಅತಿನ ಅಭಿವೃದ್ಧಿ ಇಂತಹ ಜನರಿಂದಲೇ ಆಗುವುದು. ನೀವು ಅಂತಹ ಸ್ಥಾನವನ್ನು ಅಥವಾ ಅದರ ಸಮೀಪದ ಸ್ಥಾನವನ್ನಾದರೂ ತಲಪಿದರೆ ನೀವು ಹೊರಗಿಳಿಯದಿದ್ದರೂ ನೀವು ಯಾವುದಾದರೂ ರಹಸ್ಯ ಸ್ಥಳದಲ್ಲಿ ವಾಸಿಸುತ್ತಿದ್ದರೂ ಜನರು ನಿಮ್ಮ ಸುತ್ತು ಮುತ್ತು ಜಮಾಯಿಸುತ್ತಾ ಹೋಗುವರು. ಇನ್‌ಶಾಅಲ್ಲಾಹ್ ಅಹ್ಮದಿಯಾ ಜಮಾಅತಿಗೆ ಸೇರುತ್ತಾ ಹೋಗುವರು."

ಇನ್ನೊಂದು ಸಂಭವ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಿಯಾಲ್‌ಕೋಟ್‌ಗೆ ಹೋದಾಗ ಮೌಲವಿಗಳು ಫತ್ವ ಹೊರಡಿಸಿದರು. ಯಾರು ಮಿರ್ಝಾ ಸಾಹೇಬರ ಭಾಷಣ ಆಲಿಸಲು ಹೋಗುತ್ತಾರೋ ಅವರ ನಿಕಾಹ್ ರದ್ದಾಗುತ್ತದೆ ಎಂದು. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಕರ್ಷಣೆ ಹೇಗಿತ್ತೆಂದರೆ ಜನರು ಮೌಲವಿಗಳ ಫತ್ವಗಳನ್ನು ಗಮನಿಸಲಿಲ್ಲ.

ಹಝ್ರತ್ ಮೌಲವಿ ಬುರ್‌ಹಾನುದ್ದೀನ್ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಓರ್ವ ಪ್ರಧಾನ ಶಿಷ್ಯ (ಸಹಾಬಿ) ಆಗಿದ್ದರು. ಮೊದಲು ಅವರು ವಹಾಬಿ ವಿಭಾಗದ ಬಹುದೊಡ್ಡ ಪಂಡಿತರಾಗಿದ್ದರು. ಬಹಳ ಸಮಾನ್ಯ ವ್ಯಕ್ತಿತ್ವ. ಅವರನ್ನು ನೋಡಿದರೆ ಯಾರಿಗೂ ಅವರನ್ನು ಅಷ್ಟು ದೊಡ್ಡ ವಿದ್ವಾಂಸ ಎಂದು ಕಾಣುತ್ತಿರಲಿಲ್ಲ. ಅವರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಿಯಾಲ್‌ಕೋಟ್‌ಗೆ ಹೋದಾಗ ಕಠಿಣ ವಿರೋಧ ಎದುರಿಸಬೇಕಾಯಿತು. ಅವರು ಮರಳಿ ಹೋದ ನಂತರ ಶತ್ರುಗಳಿಗೆ ಅಹ್ಮದಿ ಎಂದು ಯಾರ ಬಗ್ಗೆ ತಿಳಿಯುತ್ತದೆಯೋ ಅವರನ್ನು ಕಠಿಣವಾಗಿ ಕಷ್ಟಕ್ಕೊಳಪಡಿಸುತ್ತಿದ್ದರು. ಮೌಲವಿ ಬುರ್‌ಹಾನ್ ಸಾಹೇಬರಿಗೆ, ಅವರು ರೈಲು ನಿಲ್ದಾಣದಿಂದ ಹಿಂದಿರುಗುತ್ತಿದ್ದಾಗ ಶತ್ರುಗಳು ಅವರ ಮೇಲೆ ಸೆಗಣಿ ಎಸೆಯಲು ತೊಡಗಿದರು. ಅವರ ಬಾಯಿಗೆ ಸಹ ಸೆಗಣಿ ಹಾಕಿದರು. ಆದರೆ ಅವರು ಆ ಕಷ್ಟವನ್ನು ಪ್ರತಿಭಟಿಸದೆ ಅನುಭವಿಸಿದರು. ಅವರು ತಾನು ಅಹ್ಮದಿಯಾದ ಬಗ್ಗೆ ಒಂದು ಘಟನೆ ಹೀಗೆ ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮಹ್‌ದೀ ಎಂದು ವಾದಿಸುವ ಮೊದಲು ಅವರನ್ನು ಮೌಲವಿ ಬುರ್‌ಹಾನ್ ಸಾಹೇಬರು ಕಾಣಲು ಬಂದಾಗ ಅವರು ಬರೆಯುತ್ತಾ ಬಹಳ ವೇಗವಾಗಿ ಅತ್ತಿತ್ತ ನಡೆಯುತ್ತಿರುವುದಾಗಿ ಕಂಡರು. ಆಗ ಮೌಲವಿ ಬುರ್‌ಹಾನ್ ಸಾಹೇಬರು ಯೋಚಿಸಿದರು– ಮಿರ್ಝಾ ಸಾಹೇಬರು ಖಂಡಿತವಾಗಿಯೂ ಯಾವುದೋ ಭವ್ಯ ಕೆಲಸ ಲೋಕದಲ್ಲಿ ಮಾಡಲಿದ್ದಾರೆ ಎಂದು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ವೇಗವಾಗಿ ಕೆಲಸ ಮಾಡುವುದರಿಂದ ಸಮಯದ ಉಳಿತಾಯವಾಗುತ್ತದೆ. ಮಕ್ಕಳು ಬೇಗ ಬೇಗನೆ ಕೆಲಸ ಮಾಡಲು ಬೇಗನೆ ಯೋಚಿಸಲು ಕಲಿಯಬೇಕು. ಆದರೆ, ಬೇಗನೆ ಎಂದರೆ ಅವಸರ ಮಾಡಿ ದುಡುಕುವುದು ಎಂದರ್ಥವಲ್ಲ. ಯೋಚಿಸಿ ಬೇಗನೆ ಕೆಲಸ ಮಾಡಬೇಕು. ತ್ವರೆ ಪಡುವುದು ಶೈತಾನನ ಕೆಲಸವಾಗಿದೆ. ಆದರೆ ಯೋಚಿಸಿ ಬೇಗನೆ ಕೆಲಸ ಮಾಡುವವನು ಅಲ್ಲಾಹನ ಸೈನಿಕನಾಗಿದ್ದಾನೆ. ದೊಡ್ಡವರು ಮತ್ತು ಹುದ್ದೇದಾರರು ತಮ್ಮ ಕೆಲಸಗಳನ್ನು ವೇಗವಾಗಿ ಮಾಡಬೇಕು. ನಾವು ಮಸೀಹರನ್ನು ನಂಬುವವರು ಆಗಿದ್ದೇವೆ. ಅವರು ಸಮಯವನ್ನು ಬಹಳ ಉತ್ತಮವಾಗಿ ಬಳಸಿದರು. ಅವರ ಬಗ್ಗೆ ಮೆಚ್ಚುಗೆ ಸೂಚಿಸುತ್ತಾ ಅಲ್ಲಾಹನು ಹೇಳಿದನು: "ನಿನ್ನ ಸಮಯ ನಿರರ್ಥಕವಾಗಲಾರದು" ಎಂದು. ನಾವು ಅದರ ಬಗ್ಗೆ ಗಮನ ಹರಿಸಬೇಕು.

ಮೃತ್ಯುವಿಗೆ ಹೆದರುವವನನ್ನು ಶತ್ರುಗಳು ಹೆದರಿಸುತ್ತಾರೆ ಎಂದು ವಿವರಿಸಲಿಕ್ಕಾಗಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಮೌಲವಿ ಬುರ್‌ಹಾನುದ್ದೀನ್‌ರ ಈ ಘಟನೆ ವಿವರಿಸಿದರು. ವಾಸ್ತವಿಕವಾದುದೇನೆಂದರೆ ಶತ್ರುಗಳು

‘ಇವರು ಮೃತ್ಯುವಿಗೆ ಹೆದರುತ್ತಾರೆ’ ಎಂದು ತಿಳಿದಾಗ “ನಾವು ಸಹ ಅವರನ್ನು ಹೆದರಿಸೋಣ” ಎಂದು ಮುಂದಾಗುತ್ತಾರೆ. ಅಲ್ಲಾಹನು ಪವಿತ್ರ ಖುರ್ಆನ್‌ನಲ್ಲಿ ಹೇಳಿದ್ದಾನೆ ಶೈತಾನ್ ತನ್ನ ಸ್ನೇಹಿತರನ್ನು ಹೆದರಿಸುತ್ತಾನೆಂದು.

ಯಾರಾದರೂ ಹೆದರುವುದಾದರೆ ಶತ್ರುಗಳು ಈತ ಶೈತಾನನ ಸ್ನೇಹಿತನೆಂದು ಗಣಿಸುತ್ತಾರೆ. ಯಾರಾದರೂ ಹೆದರುವುದಿಲ್ಲವಾದರೆ ಮತ್ತು ಆಕ್ರಮಣಗಳನ್ನೂ ಕಷ್ಟಗಳನ್ನೂ ಅಲ್ಲಾಹನ ಬಹುಮಾನ ಎಂದು ಗಣಿಸಿ “ಅಲ್ಲಾಹನು ನನಗೆ ಅನುಗ್ರಹ ನೀಡಿದನು, ಅವನು ನನಗೆ ಗೌರವ ನೀಡಿದನು, ನಾನು ಅವನಿಗೋಸ್ಕರವಾಗಿ ಪೆಟ್ಟು ತಿನ್ನುತ್ತಿದ್ದೇನೆ” ಎಂದು ಭಾವಿಸುವುದಾದರೆ ಆಗ ಶತ್ರು ಹಿಂಜರಿಯುತ್ತಾನೆ. ಅವನಲ್ಲಿ ಕೊನೆಗೆ ನಾಚಿಕೆ ತಲೆದೋರುತ್ತದೆ.

ಮೌಲವಿ ಬುರ್ಹಾನುದ್ದೀನ್ ಸಾಹೇಬರ ಬಗ್ಗೆ ಇನ್ನೊಂದು ಘಟನೆ ಹೀಗಿದೆ: ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಒಮ್ಮೆ ಹೀಗೆ ಹೇಳಿದರು: ನಾನು ಸ್ವಪ್ನದಲ್ಲಿ ನನ್ನ ಮೃತ ಸಹೋದರಿಯನ್ನು ಕಂಡೆನು. ನಾನು ಕೇಳಿದೆ– ‘ಹೇಗಿರುವೆ’ ಆಕೆ ಹೇಳಿದಳು– ಅಲ್ಲಾಹನು ಬಹಳ ಅನುಗ್ರಹ ನೀಡಿದ್ದಾನೆ. ನನ್ನನ್ನು ಕ್ಷಮಿಸಿದ್ದಾನೆ. ನಾನು ಸ್ವರ್ಗದಲ್ಲಿ ಬಹಳ ಸಂತೋಷದಲ್ಲಿದ್ದೇನೆ ಎಂದು. ಆಗ ನಾನು ಕೇಳಿದೆ– ‘ನೀನು ಅಲ್ಲಿ ಏನು ಮಾಡುತ್ತಿರುವೆ’ ಆಕೆ ಹೇಳಿದಳು– ‘ನಾನು ಬೇರಿಹಣ್ಣು ಮಾರುತ್ತಿದ್ದೇನೆ’ ಆಗ ಮೌಲವಿ ಸಾಹೇಬರು ಸ್ವಪ್ನದಲ್ಲಿ ಯೋಚಿಸಿದರು. ನನ್ನ ಕುಟುಂಬ ಬಡ ಕುಟುಂಬವಾಗಿದೆ. ಪ್ರಾಯಶಃ ಸ್ವರ್ಗದಲ್ಲಿ ಸಹ ಹಣ್ಣು ಮಾರಾಟ ಮಾಡಬೇಕಾಗಿದೆ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಬೇರಿ ಹಣ್ಣು ಸ್ವರ್ಗೀಯ ಹಣ್ಣಾಗಿದೆ ಅದರ ಅರ್ಥ ಎಂದೂ ಕೊನೆಗೊಳ್ಳದ ಪರಿಪೂರ್ಣ ಪ್ರೀತಿಯಾಗಿದೆ. ಸ್ವಪ್ನದ ಅರ್ಥವೇನೆಂದರೆ ನಿಮ್ಮ ಸಹೋದರಿ ಅಲ್ಲಾಹನ ಎಂದೂ ಕೊನೆಗೊಳ್ಳದ ಪ್ರೀತಿಯನ್ನು ಜನರಲ್ಲಿ ಹಂಚುತ್ತಿದ್ದಾಳೆಂದಾಗಿದೆ ಎಂದು ಹೇಳಿದರು.

ಈ ಸ್ವಪ್ನದ ಬಗ್ಗೆ ಮತ್ತೂ ವ್ಯಾಖ್ಯಾನಿಸುತ್ತಾ ಹೀಗೆ ಹೇಳುತ್ತಾರೆ: “ಸತ್ಯವಿಶ್ವಾಸಿ ಎಲ್ಲಿದ್ದರೂ ಕೆಲಸ ಮಾಡುತ್ತಾ ಇರಬೇಕಾಗಿದೆ. ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದಾನೆ– ನಿಮಗೆ ಬಿಡುವು ದೊರಕುವಾಗ ಹೆಚ್ಚು ಕಷ್ಟಪಟ್ಟು ಕೆಲಸ ಮಾಡಿರಿ ಅಲ್ಲಾಹನ ಕಡೆಗೆ ಓಡಿರಿ ಎಂದು.”

ಈ ಅಂಶವನ್ನು ನಾವು ಯಾವಾಗಲೂ ನೆನಪಿಡಬೇಕು. ಲೋಕದ ಜನರು ವಿಶ್ರಾಂತಿ ಎಂದು ಯಾವುದರ ಬಗ್ಗೆ ಹೇಳುತ್ತಾರೋ ಅಂತಹ ವಿಶ್ರಾಂತಿ ನಮಗೆ ಇಲ್ಲ. ಅಂತಹ ವಿಶ್ರಾಂತಿ ಆಶಿಸುವವರು ಇಹಲೋಕದಲ್ಲೂ ಕುರುಡರಾಗಿರುತ್ತಾರೆ ಪರಲೋಕದಲ್ಲೂ ಕುರುಡರಾಗಿರುತ್ತಾರೆ. ಆದುದರಿಂದ ಸತ್ಯವಿಶ್ವಾಸಿ ಯಾವಾಗಲೂ ಕಾರ್ಯನಿರತನಾಗಿರಬೇಕು. ಒಂದು ಗುರಿಯನ್ನು ತಲಪಿ ಇನ್ನೊಂದು ಗುರಿಯನ್ನು ಹುಡುಕಲು ಸಿದ್ಧನಾಗಬೇಕು. ವೈಯಕ್ತಿಕ ಮತ್ತು ಸಾಮೂಹಿಕ ಅಭಿವೃದ್ಧಿಯ ಮಾರ್ಗ ಮತ್ತು ರಹಸ್ಯ ಇದೇ ಆಗಿದೆ. ಅಲ್ಲಾಹನು ನಮಗೆ ಆ ರೀತಿ ಮುಂದುವರಿಯಲು ಸೌಭಾಗ್ಯ ನೀಡಿ ಅನುಗ್ರಹಿಸಲಿ – ಆಮೀನ್.

---------------*****--------------

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 06-02-2015.*

Summarized by *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

**Email**: *khutuba.kannada@gmail.com*